QUESTION FOR ANSWERS ON THE DAY (BUT NOT TAKENUP)

* *Prohibition in the State*

741 SRI K. R. THIMMARAYPPA (Pavagada).—Will the Minister for Excise and Labour be pleased to state.—

whether there is any proposal under consideration of Government to introduce prohibition in the State as done by the neighbouring State "Tamil Nadu" ?

SRI S. M. YAHYA (Minister for Excise and Labour).—

No.

2-00 P M.

CALLING ATTENTION TO MATTERS OF URGENT PUBLIC IMPORTANCE

(*1*) *re : drought condition in Nagamangala Taluk*

SRI H. T. KRISHNAPPA (Nagamangala).—I call the attention of the Minister for Revenue to the drought conditions prevailing in Nagamangala Taluk, Mandya District.

SRI S. M. KRISHNA (Minister for Industries and Parliamentry Affairs).—Sir on behalf of the Minister for Revenue as beg to state as follws —

There are no reports about complete failure of crops in Nagamangala Taluk. Nevertheless, the Deputy Commissioner, Mandya District, has been advised to report the conditions prevalent in the said Taluk. According to a report received from the Deputy Commissioner it would appear that crops have been affected due to untimely rains in the said Taluk. He has advised the Tahsildars to build up proposals for suspension of Land Revenue collection for 1974-75, based on the results of the crop cutting experiments. He has also instructed the Tahsildar not to adopt coercive steps for collection of Land Revenue.

On receipt of a futher detailed report from the Deputy Commissioner, Mandya District, necessary action will to taken to expedite budgetted works of the Public Works Department in order to provide employment to the labourers, wherever necessary, if the situation warrents.

In addition to that one rig machine will be sent to Nagamangala and about Rs 50,000 will be provided for taking up road works. The situation is being watched by the Government.

ಶ್ರೀ. ಎಚ್. ಟಿ. ಕೃಷ್ಣಪ್ಪ —ಮಾನ್ಯ ಅಧ್ಯಕ್ಷರೇ, ನನಗೆ ಕೊಟ್ಟಿರತಕ್ಕ ಹೇಳಿಕೆಯಲ್ಲಿ ಮಾನ್ಯ ಮಂತ್ರಿಗಳು ಕೊನೆಯಲ್ಲಿ ಏನು ಆಶ್ವಾಸನೆ ಮಾತನ್ನು ಹೇಳಿದರೋ ಅದು ಸೇರಿಲ್ಲ. ಸರ್ಕಾರ ಸ್ವಲ್ಪ ಮಟ್ಟಿಗೆ ಎಚ್ಚೆತ್ತು ಮೊಂದಿರತಕ್ಕ ಜನಗಳಿಗೆ ಏನಾದರೂ ಸಹಾಯ ಮಾಡತಕ್ಕ ರೀತಿಯ ಪ್ರತಿಕ್ರಿಯೆಯನ್ನು ತೋರಿಸಿದ್ದಾರೆಂದು ಕಾಣಿಸುತ್ತದೆ. ನಾನು ಒಂದು ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿ ಆದರಲ್ಲಿ ೧೮೦ ಹಳ್ಳಿಗಳಲ್ಲಿ ಎರಡಾಣೆಗಳಿಗಿಂತಲೂ ಕಡಮೆ ಬೆಳೆ ಬಂದಿದೆ ಮತ್ತು ಯಾವ ಕೆರೆಗಳೂ ಸಹ ತುಂಬಿಲ್ಲ ಹಾಗೂ ಕುಡಿಯುವ ನೀರಿಗೆ ಬಹಳ ಅಭಾವವಿದೆ, ಎರಡು ಮೂರು ಮೈಲಿ ದೂರದಿಂದ ನೀರನ್ನು ತಂದು ಬಳಸಬೇಕಾದ ಪರಿಸ್ಥಿತಿ ಇದೆ ಎನ್ನತಕ್ಕ ವಿಚಾರವನ್ನು ಸರ್ಕಾರಕ್ಕೆ ತಿಳಿಸಿದ್ದಾಗ್ಯೂ ಸಹ ಸ್ಟಾಟಿಸ್ಟಿಕಲ್ ಡಿಪಾರ್ಟ್‌ಮೆಂಟಿನವರು ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಮಾಡಿ ಬೆಳೆ ಸ್ವಲ್ಪಮಟ್ಟಿಗೆ ಆಗಿದೆ ಎಂದು ವರದಿ ಮಾಡಿದ್ದಾರೆಂದೂ, ಡೆಪ್ಯುಟಿ ಕಮಿಷನರ ವರದಿ ಮತ್ತು ಸ್ಟಾಟಿಸ್ಟಿಕಲ್ ಡಿಪಾರ್ಟ್‌ಮೆಂಟಿನಿಂದ ಬಂದಂಥ ವರದಿ ಎರಡಕ್ಕೂ ಸಹ ಒಂದಕ್ಕೊಂದಕ್ಕೆ ಸ್ವಲ್ಪ ವ್ಯತ್ಯಾಸವಿದ್ದುದರಿಂದ ಅವೆರಡನ್ನೂ ಸಮನ್ವಯ ಮಾಡಿ ಬೇರೆ ವರದಿಯನ್ನು ಕಳುಹಿಸಿ ಎಂದು ಪಾಪಸು ಕಳುಹಿಸಿದ್ದಾರೆನ್ನುವ ವಿಚಾರ ಗೊತ್ತಾಗಿದೆ ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಎಲ್ಲಿ ಮಾಡಿದರೆಂಬುದು ಗೊತ್ತಿಲ್ಲ. ಈಗ ಮುಖ್ಯವಾಗಿ ಇರುವುದು ಕುಡಿಯುವ ನೀರಿನ ಸಮಸ್ಯೆ ಕೆಲವು ತಾಲ್ಲೂಕುಗಳಿಗೆ ಎರಡು ಮೂರು ರಿಗ್ ಮೆಷೀನ್ಸ್ ಕಳುಹೀ ಅಭಾವ ಪರಿಸ್ಥಿತಿ ಇರುವ ನಮ್ಮ ತಾಲ್ಲೂಕಿಗೆ ರಿಗ್ ಮೆಷೀನ್ಸ್ ಕಳುಹಿಸುತ್ತಿಲ್ಲ. ಮಾನ್ಯ ಕೈಗಾರಿಕಾ ಮಂತ್ರಿಗಳಿಗೆ ನಾಗಮಂಗಲ ತಾಲ್ಲೂಕಿನ ಪರಿಸ್ಥಿತಿ ಚೆನ್ನಾಗಿ ಅರ್ಥವಾಗಿದೆ. ಆದ್ದರಿಂದ ನಾನು ಅವರನ್ನು ಕೇಳುವುದು ಇಷ್ಟೇ. ೧೮೦ ಹಳ್ಳಿಗಳಲ್ಲಿ ಎರಡಾಣೆಗಿಂತ ಕಡಮೆ ಬೆಳೆಯಾಗಿದೆ, ಯಾವ ಕೆರೆಗಳೂ ತುಂಬಿಲ್ಲ ಎನ್ನತಕ್ಕ ವರದಿ ಡೆಪ್ಯುಟಿ ಕಮಿಷನರಿಂದ ತಮ್ಮ ಕೈ ಸೇರಿದೆಯೇ ಇಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಡೆಪ್ಯುಟಿ ಕಮಿಷನರು ಕೊಟ್ಟಿರತಕ್ಕ ವರದಿಯ ಆಧಾರದ ಮೇಲೆ ನಾವು ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ತಿಳಿಸಿದ್ದೇನೆ. ನಾಗಮಂಗಲ ತಾಲ್ಲೂಕಿನಲ್ಲಿ ಸರಾಸರಿ ೨೭ ಅಂಗುಲ ಮಳೆಯಾಗುತ್ತದೆ ೧೯೭೪ ನೇ ಇಸವಿಯಲ್ಲಿ ಹದಿನಾರುವರೆ ಅಂಗುಲ ಮಳೆ ಬಂದಿದ್ದು ಅನೇಕ ಕೆರೆಗಳಿಗೆ ನೀರು ಬರಲಿಲ್ಲ, ಕೆಲವು ಕೆರೆಗಳಿಗೆ ಅರ್ಧಮರ್ಧ ನೀರು ಬಂದಿರಬಹುದು. ನೂರು ಹಳ್ಳಿಗಳಿರಲಿ, ೨೦೦ ಹಳ್ಳಿಗಳಿರಲಿ, ಎಲ್ಲೆಲ್ಲಿ ಎರಡಾಣೆಗಿಂತ ಕಡಮೆ ಬೆಳೆಯಾಗಿದೆ ಅಲ್ಲಿ ಭೂಕಂದಾಯ ವಜಾ ಆಗುತ್ತದೆ. ಮನ್ನಾ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಭೂ ಕಂದಾಯ ವಜಾ ಮಾಡಿದರೆ ಆಯಿತೇ ? ಪರಿಹಾರ ಕಾರ್ಯಗಳನ್ನು ಏನು ತೆಗೆದುಕೊಂಡಿದ್ದಾರೆ ?

ಅಧ್ಯಕ್ಷರು.—ನಾನು ಮಾನ್ಯ ಸದಸ್ಯರನ್ನು ಕರೆದಿಲ್ಲ. ಅವರು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಸರ್ಕಾರದ ಗಮನಕ್ಕೆ ಇಂಥ ವಿಷಯಗಳನ್ನು ಒಂದು ವರ್ಷದಿಂದ ತರುತ್ತಿದ್ದರೂ ಅವರು ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಒಂದೆರಡು ರೂಪಾಯಿ ಕಂದಾಯ ವಜಾ ಮಾಡಿದರೆ ಬಹಳ ದೊಡ್ಡದಾಯಿತೇ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ತರಹ ಮಾಡಿದರೆ ಸರಿಯಲ್ಲ, ನಾನು ನಿಮಗೆ ಎಚ್ಚರಿಕೆ ಕೊಡುತ್ತೇನೆ. ಮಾನ್ಯ ಸದಸ್ಯರಾದ ಕೃಷ್ಣಪ್ಪನವರಿಗೆ ಸಾಕಷ್ಟು ಶಕ್ತಿ ಇದೆ, ಮಾನ್ಯ ಸದಸ್ಯರಿಂದ ಪುಷ್ಟಿ ಬೇಕಾಗಿಲ್ಲ. ಪ್ರತಿಯೊಂದಕ್ಕೂ ನಿಂತುಕೊಂಡರೆ ಹೇಗೆ ? ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಆಗಾಗ್ಗೆ ಕ್ಷಾಮಕ್ಕೆ ತುತ್ತಾಗಿರುವ ೬೭ನೇ ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡು ಅವುಗಳಿಗೆ ವಿಶೇಷವಾದ ಧನ ಸಹಾಯ ಕೊಟ್ಟು ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಮಾಡುವಂಥ ವ್ಯವಸ್ಥೆ ಮಾಡಿದ್ದಾರೆ ಅದೇ ಆತರಹೋಲನ್ನು ನಾಗಮಂಗಲ ತಾಲ್ಲೂಕಿಗೆ ಅನ್ವಯಿಸಿದರೆ, ಇತರ ತಾಲ್ಲೂಕುಗಳಂತೆಯೇ ಅಥವಾ ಅದಕ್ಕಿಂತ ಕೆಳಮಟ್ಟದಲ್ಲಿ ನಾಗಮಂಗಲ ತಾಲ್ಲೂಕಿಗೆ ಏನ್ನುವುದು ಅರ್ಥವಾಗುತ್ತದೆ ಆದ್ದರಿಂದ ನಾಗಮಂಗಲ ತಾಲ್ಲೂಕನ್ನು ಸಹ ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುವ ತಾಲ್ಲೂಕು ಎಂದು ಪರಿಗಣಿಸಿ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳತಕ್ಕ ಯೋಚನೆ ಮಾಡುತ್ತಾರೆಯೇ

ಶ್ರೀ ಎಸ್. ಎಂ. ಕೃಷ್ಣ.—ಯೋಚನೆ ಮಾಡುತ್ತೇವೆ.